ಪಿ ಡಬ್ಲೂ: 1 ಅಸಲು ದಾವಾ: 45/2020

## ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ಗುಬ್ಬಿ

**ದಿನಾಂಕ: 27.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| | **ಸತ್ಯ ಪ್ರತಿಜ್ಞೆಯ ಮೇರೆಗೆ** |

**ಮುಂದುವರೆದ ಪಾಟೀ ಸವಾಲು:- 3 ರಿಂದ 7ನೇ ಪ್ರತಿವಾದಿ ಪರ ವಕೀಲರಾದ ಶ್ರೀ. ಡಿ ಎಂ ಎನ್ ರವರಿಂದ**

ದಾವಾ ಅನುಸೂಚಿ ಸ್ವತ್ತು ನಿಮಗೆ ಹೇಗೆ ಬಂದಿರುತ್ತದೆ ಎಂದು ಹೇಳಲು ಅಗುತ್ತದಾ ಎಂದರೆ ಸಾಕ್ಷಿಯು 2013 ರಲ್ಲಿ ಆಯೇಶಾ ಬೀ ರವರಿಂದ ಕ್ರಯಕ್ಕೆ ಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನೀವು ಸದರಿ ಆಸ್ತಿಯನ್ನು ಕೊಂಡಾಗ ಅದು ಖಾಲಿ ಜಾಗವಾಗಿತ್ತಾ ಅಥವಾ ಮನೆ ಇತ್ತಾ ಎಂದರೆ ಸಾಕ್ಷಿಯು ಮನೆ ಇತ್ತು ಎಂದು ನುಡಿಯುತ್ತಾರೆ. ನೀವು ಎಷ್ಟು ವಿಸ್ತೀರ್ಣದ ಆಸ್ತಿಯನ್ನು ಅವರಿಂದ ಕೊಂಡಿದ್ದೀರಿ ಎಂದರೆ ಸಾಕ್ಷಿಯು 30x40 ಅಡಿ ಎಂದು ನುಡಿಯುತ್ತಾರೆ. ಸದರಿ 30x40 ಅಡಿ ವಿಸ್ತೀರ್ಣದ ಪೈಕಿ ಎಷ್ಟು ಅಡಿಗಳ ಮನೆ ಇತ್ತು ಎಂದರೆ ಸಾಕ್ಷಿಯು 30x40 ಅಡಿ ಪೂರ್ತಿ ವಿಸ್ತೀರ್ಣದಲ್ಲಿ ಮನೆ ಇತ್ತು ಎಂದು ನುಡಿಯುತ್ತಾರೆ. ನೀವು ಅವರಿಂದ ಮನೆಯನ್ನು ಖರೀದಿ ಮಾಡಿದ ನಂತರ ಆ ಮನೆಯನ್ನು ಕೆಡವಿ ನೀವು ಹೊಸದಾಗಿ ಮನೆಯನ್ನು ಕಟ್ಟಿದ್ದೀರಿ ಎಂದರೆ ಸರಿಯಲ್ಲ. ನೀವು ಕೊಂಡುಕೊಂಡ ಸಮಯದಲ್ಲಿ ಮಣ್ಣಿನಿಂದ ಕಟ್ಟಿದ ಮನೆಯಾಗಿತ್ತು ಎಂದರೆ ಸಾಕ್ಷಿಯು ಇಟ್ಟಿಗೆಯಿಂದ ಕಟ್ಟಿದ ಮನೆ ಎಂದು ನುಡಿಯುತ್ತಾರೆ. ಮಣ್ಣಿನಿಂದ ಕಟ್ಟಿದ್ದ ಮನೆಯನ್ನು ಕೆಡವಿ ನೀವು ಈಗ ಆರ್ ಸಿ ಸಿ ಮನೆಯನ್ನು ಕಟ್ಟಿದ್ದೀರಿ ಎಂದರೆ ಸರಿಯಲ್ಲ. ನಿಡಿ.1 ರಲ್ಲಿ ಕಾಣುತ್ತಿರುವ ಆರ್ ಸಿ ಸಿ ಮನೆ ಯಾರದ್ದು ಎಂದರೆ ಸಾಕ್ಷಿಯು ನನ್ನ ಮನೆ ಎಂದು ನುಡಿಯುತ್ತಾರೆ. ನೀವು ಆಯೇಷ

ಬೀ ರವರಿಂದ ತೆಗೆದುಕೊಂಡಾಗ ಇದ್ದ 25x32 ಅಡಿಗಳ ಮಣ್ಣಿನ ಗೋಡೆಯ ಮನೆಯನ್ನು ಕೆಡವಿ ನೀವು ಈಗ ಪೂರ್ತಿ 30x40 ಅಡಿ ವಿಸ್ತೀರ್ಣದಲ್ಲಿ ಆರ್ ಸಿ ಸಿ ಮನೆಯನ್ನು ಕಟ್ಟಿದ್ದಿ:ರಿ ಎಂದರೆ ಸರಿಯಲ್ಲ. ನೀವು ಕಟ್ಟಿರುವ ಆರ್ ಸಿ ಸಿ ಮನೆಯನ್ನು ಎಷ್ಟು ಅಡಿ ವಿಸ್ತೀರ್ಣದಲ್ಲಿ ಕಟ್ಟಿದ್ದೀರಿ ಎಂದರೆ ನಾವು ಎಷ್ಟು ವಿಸ್ತೀರ್ಣದ ಆಸ್ತಿಯನ್ನು ಕೊಂಡಿದ್ದೆವು ಅಷ್ಟೇ ವಿಸ್ತೀರ್ಣದಲ್ಲಿ ನಮಗೆ ಕ್ರಯಕ್ಕೆ ಕೊಟ್ಟಿರುವವರೆ ಮೊದಲೇ ಮನೆಯನ್ನು ಕಟ್ಟಿದ್ದರು ನಂತರ ನಮಗೆ ಮಾರಾಟ ಮಾಡಿದ್ದರು ಎಂದು ನುಡಿಯುತ್ತಾರೆ. ಮನೆಯ ಮೇಲ್ಮಾಗಕ್ಕೆ ಹೋಗಲು ಸುಮಾರು 10 ಅಡಿ ವಿಸ್ತೀರ್ಣದಲ್ಲಿ ಮೆಟ್ಟಿಲುಗಳನ್ನು ಕಟ್ಟಿದ್ದೀರಿ ಎಂದರೆ ನನಗೆ ಕ್ರಯಕ್ಕೆ ಕೊಟ್ಟಿರರುವೇ ಕಟ್ಟಿದ್ದರು ಎಂದು ನುಡಿಯುತ್ತಾರೆ. ನಿಮಗೆ ಕ್ರಯಕ್ಕೆ ನೀಡಿದ್ದರವರು ನಿಡಿ.1 ರಲ್ಲಿ ಕಾಣುತ್ತಿರುವ ಆರ್ ಸಿ ಸಿ ಮನೆಯನ್ನು ಕಟ್ಟಿರಲಿಲ್ಲ ಮತ್ತು ನೀವೇ ಕ್ರಯಕ್ಕೆ ಕೊಂಡ ನಂತರ ಸದರಿ ಆರ್ ಸಿ ಸಿ ಮನೆಯನ್ನು ಕಟ್ಟಿದ್ದೀರಿ ಎಂದರೆ ಸರಿಯಲ್ಲ. ಮನೆಯಿಂದ ಪೂರ್ವಕ್ಕೆ ಸುಮಾರು 17 ಅಡಿ ಜಾಗಕ್ಕೆ ನೀವು compound ನಿರ್ಮಾಣ ಮಾಡಿದ್ದೀರಿ ಎಂದರೆ ಸರಿಯಲ್ಲ. ಆ 17 ಅಡಿ compound ಅನ್ನು ರಸ್ತೆಗೆ ಅಡ್ಡಲಾಗಿ ಕಟ್ಟಿದ್ದೀರಿ ಎಂದು ಹೇಳಿ ಎಸ್ ಕೊಡಗೀಹಳ್ಳಿ ಗ್ರಾಮ ಪಂಚಾಯಿತಿ ರವರು ದಿ: 21.01.2020 ರಂದು ನಿಮಗೆ ನಿಪಿ.2 ರಂತೆ ನೋಟೀಸ್ ನೀಡಿದ್ದರು ಎಂದರೆ ಸರಿಯಲ್ಲ. ಆ ನೋಟೀಸ್ ಅನ್ನು ನಿಮಗೆ ಜಾರಿ ಮಾಡಲು ಬಂದಾಗ ನೀವು ತಿರಸ್ಕಾರ ಮಾಡಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನಗೆ ಗೊತ್ತೆ ಇಲ್ಲ ತಿಳಿಸಿಲ್ಲ ಎಂದು ನುಡಿಯುತ್ತಾರೆ. ನಂತರ ದಿ: 11.01.2022 ರಂದು ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಣಾಧಿಕಾರಿಗಳು ಸ್ಥಳಕ್ಕೆ ಬಂದು ಪರಿಶೀಲಿಸಿ ಸುಮಾರು 17 ಅಡಿ ಜಾಗವನ್ನು ನೀವು ಒತ್ತುವರಿ ಮಾಡಿ ಮನೆಯ ಪೂರ್ವ ದಿಕ್ಕಿಗೆ ರಸ್ತೆಗೆ ಅಡ್ಡಲಾಗಿ compound ನಿರ್ಮಾಣ ಮಾಡಿದ್ದೀರಿ ಎಂದು ನಿಡಿ.6 ರಂತೆ ವರದಿಯನ್ನು ನೀಡಿದ್ದಾರೆ ಎಂದರೆ ಸರಿಯಲ್ಲ. ನಂತರ ಅವರು ರಸ್ತೆಗೆ ಅಡ್ಡಲಾಗಿ ಕಟ್ಟಿದ್ದ 3 ಅಡಿ ಒತ್ತುವರಿ ಜಾಗವನ್ನು ತೆರವುಗೊಳಿಸಿ 14

ಅಡಿಯನ್ನು ಹಾಗೇಯೇ ಬಿಟ್ಟಿದ್ದಾರೆ ಎಂದರೆ ಸರಿಯಲ್ಲ. ನೀವು ಒತ್ತುವರಿ ಮಾಡಿದ್ದ 17 ಅಡಿ ಜಾಗದ ಪೈಕಿ ಒಳಚರಂಡಿ ಮಾಡುವ ಉದ್ದೇಶಕ್ಕೆ 3 ಅಡಿ ಜಾಗವನ್ನು ಮಾತ್ರ ಅವರು ತೆರವುಗೊಳಿಸಿದ್ದಾರೆ ಎಂದರೆ ಸಾಕ್ಷಿಯು ರಸ್ತೆಯಿಂದ 8 ವರೆ ಅಡಿ compound ಅನ್ನು ಕೆಡವಿದ್ದಾರೆ ಎಂದು ನುಡಿಯುತ್ತಾರೆ. 3 ರಿಂದ 7ನೇ ಪ್ರತಿವಾದಿಯ ವಿರುದ್ದ ನೀವು ಸಿ ಎಸ್ ಪುರ ಪೋಲೀಸ್ ಠಾಣೆಗೆ ಒಂದು ಸುಳ್ಳು ದೂರನ್ನು ಕೂಡ ನೀಡಿದ್ದೀರಿ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನಾನು ಪೋಲೀಸ್ ಠಾಣೆಗೆ ಹೋಗಿಲ್ಲ ಎಂದು ನುಡಿಯುತ್ತಾರೆ. ಪಂಚಾಯಿತಿ ರವರು ಮತ್ತು ಇ ಒ ರವರು ನೀಡಿದ ವರದಿಯ ಆಧಾರದ ಮೇಲೆ ನೀವು ಸುಳ್ಳು ದೂರನ್ನು ನೀಡಿದ್ದೀರಿ ಎನ್ನುವ ಕಾರಣಕ್ಕೆ ಸಿ ಎಸ್ ಪುರ ಪೋಲೀಸರು 3 ರಿಂದ 7ನೇ ಪ್ರತಿವಾದಿಯರ ವಿರುದ್ದ ಬಿ ಅಂತಿಮ ವರದಿಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಖಾತಾ ನಂ.154 ರಲ್ಲಿ ನೀವು ಒತ್ತುವರಿ ಮಾಡಿ compound ಅನ್ನು ನಿರ್ಮಾಣ ಮಾಡಿದ್ದು ಅದನ್ನು ತೆರವುಗೊಳಿಸುವ ಸಮಯದಲ್ಲಿ ನೀವು ಅವರ ವಿರುದ್ದ ಗಲಾಟೆ ಮಾಡಿ ಅವರುಗಳ ವಿರುದ್ದ ಸುಳ್ಳು ದೂರನ್ನು ನೀಡಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಆಸ್ಪತ್ರೆಯಲ್ಲಿ ಇದ್ದೆನು ಅವರು ಬಂದಿರುವುದು ನನಗೆ ಗೊತ್ತಿಲ್ಲ, ಅವರು compound ಅನ್ನು ಹೊಡೆದಿರುವುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನೀವು ಒತ್ತುವರಿ ಮಾಡಿದ ಸರ್ಕಾರ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಪ್ರತಿವಾದಿಗಳ ವಿರುದ್ದ ಈ ಸುಳ್ಳು ಪ್ರಕರಣ ದಾಖಲು ಮಾಡಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**ಓ . ಹೇ. ಕೇ. ಸರಿ. ಇದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ,**
ಗುಬ್ಬಿ

Pw.1 is present and fully cross examined.
For arguments.
Call on.03.08.2026.